ನಂ: ಕವಿವಿ/ಸಿಂಡಿಕೇಟ್/ನಡಾವಳಿಗಳು-61/2025-26/ 79 ದಿನಾಂಕ: 11 SEP 2025

**:: ಸಿಂಡಿಕೇಟ ಸಭೆಯ ನಡಾವಳಿಗಳು ::**

ಕರ್ನಾಟಕ ವಿಶ್ವವಿದ್ಯಾಲಯದ ಸಾಮಾನ್ಯ ಸಿಂಡಿಕೇಟ್ ಸಭೆಯನ್ನು **ದಿನಾಂಕ 10 ಸೆಪ್ಟೆಂಬರ್, 2025 ರಂದು ಮುಂಜಾನೆ 11:00 ಗಂಟೆಗೆ** ಸಿಂಡಿಕೇಟ ಸಭೆಯನ್ನು ಕವಿವಿ ಮುಖ್ಯ ಆಡಳಿತ ಕಟ್ಟಡದ ಸಿಂಡಿಕೇಟ್ ಸಭಾ ಭವನದಲ್ಲಿ ಜರುಗಿಸಲಾಯಿತು. ಸಭೆಯ ನಡಾವಳಿಗಳು ಈ ಕೆಳಗಿನಂತಿವೆ.

**ದಿನಾಂಕ: 10.09.2025ರ ಸಭೆಯಲ್ಲಿ ಈ ಕೆಳಗಿನಂತೆ ಸದಸ್ಯರು ಉಪಸ್ಥಿತರಿದ್ದರು:**

| | | |
|---|---|---|
| 1) | ಪ್ರೊ. ಐರಾನಿ ಮೊಹಮ್ಮದ್ ಖಾನ್, ಕುಲಪತಿಗಳು, ಕ.ವಿ.ವಿ. ಧಾರವಾಡ | ಅಧ್ಯಕ್ಷರು |
| 2) | ಡಾ(ಶ್ರೀಮತಿ). ಕರೀಮುನ್ನಿಸ್ಸಾ ಸಯ್ಯದ್, ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಧಾರವಾಡ | ಸದಸ್ಯರು |
| 3) | ಡಾ. ಅರವಿಂದ ಎ. ಮೂಲಿಮನಿ, ಡೀನರು | ಸದಸ್ಯರು |
| 4) | ಶ್ರೀಮತಿ. ಅಂಜನಾ ಎಸ್. ಬಸನಗೌಡರ, ಹುಬ್ಬಳ್ಳಿ | ಸದಸ್ಯರು |
| 5) | ಶ್ರೀಮತಿ. ರತ್ನಾ ಪಾಟೀಲ, ಧಾರವಾಡ | ಸದಸ್ಯರು |
| 6) | ಡಾ. ಲಿಂಗರಾಜ ಸಿ. ಮುಳ್ಳಳ್ಳಿ, ಪ್ರಾಚಾರ್ಯರು, ಹುಬ್ಬಳ್ಳಿ | ಸದಸ್ಯರು |
| 7) | ಡಾ.(ಶ್ರೀಮತಿ). ಎನ್. ಸಿ. ಪಾಟೀಲ, ಪ್ರಾಚಾರ್ಯರು, ಧಾರವಾಡ | ಸದಸ್ಯರು |
| 8) | ಡಾ. ಎಚ್. ಎಚ್. ಭಟ್, ಪ್ರಾಚಾರ್ಯರು, ಸದಾಶಿವಗಡ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 9) | ಡಾ. ಬಿ. ಬಿ. ಹೊಳಗುಂದಿ, ಪ್ರಾಚಾರ್ಯರು, ಗದಗ | ಸದಸ್ಯರು |
| 10) | ಡಾ(ಶ್ರೀಮತಿ). ಎಚ್.ಎಸ್.ಅನುಪಮಾ, ಹೊನ್ನಾವರ (ಆನ್‌ಲೈನ್ ಮೂಲಕ ಉಪಸ್ಥಿತರಿದ್ದರು) | ಸದಸ್ಯರು |
| 11) | ಶ್ರೀ. ಮಹೇಶ ವಾಯ್. ಹುಲೇನ್ನವರ, ಧಾರವಾಡ | ಸದಸ್ಯರು |
| 12) | ಶ್ರೀ. ರಾಬರ್ಟ ದದ್ದಾಪುರಿ, ಧಾರವಾಡ | ಸದಸ್ಯರು |
| 13) | ಡಾ. ಬಸವರಾಜ ಗೊರವರ, ಕುಂದಗೋಳ | ಸದಸ್ಯರು |
| 14) | ಡಾ. ಶಿವಾನಂದ ವಿ. ನಾಯಕ, ಅಂಕೋಲಾ | ಸದಸ್ಯರು |
| 15) | ಶ್ರೀ. ಶ್ಯಾಮ್ ಮಲ್ಲನಗೌಡರ, ಧಾರವಾಡ | ಸದಸ್ಯರು |
| 16) | ಡಾ. ಶೌಖತ್ ಅಜೀಮ್, ಹಿರಿಯ ಪ್ರಾಧ್ಯಾಪಕರು | ಸದಸ್ಯರು |
| 17) | ಡಾ. ಎನ್. ವಾಯ್. ಮಟ್ಟಿಹಾಳ, ಕುಲಸಚಿವರು(ಮೌಲ್ಯಮಾಪನ), ಕ.ವಿ.ವಿ. ಧಾರವಾಡ | ಸದಸ್ಯರು |
| 18) | ಶ್ರೀ. ಪ್ರದೀಪಕುಮಾರ, ಹಣಕಾಸು ಅಧಿಕಾರಿಗಳು, ಕ.ವಿ.ವಿ. ಧಾರವಾಡ | ವಿಶೇಷ ಆಹ್ವಾನಿತರು |
| 19) | ಡಾ. ಶಂಕರ ವಣಿಕ್ಯಾಳ, ಕೆಎಎಸ್, ಕುಲಸಚಿವರು(ಆಡಳಿತ). ಕ.ವಿ.ವಿ. ಧಾರವಾಡ | ಸದಸ್ಯ ಕಾರ್ಯದರ್ಶಿಗಳು |

ನಿಯಮಾನುಸಾರ ಕನಿಷ್ಠ ಅಗತ್ಯ ಸಂಖ್ಯೆ 08ಕ್ಕಿಂತ ಹೆಚ್ಚು ಸದಸ್ಯರುಗಳು ಇರುವುದನ್ನು ಖಚಿತಪಡಿಸಿಕೊಂಡು ಅಂದರೆ 19 ಜನ ಸದಸ್ಯರುಗಳು (02 ಸದಸ್ಯರು ಆನ್‌ಲೈನ್ ಮತ್ತು 17 ಸದಸ್ಯರು ಖುದ್ದು ಹಾಜರಿರುವುದನ್ನು) ಖಚಿತಪಡಿಸಿಕೊಂಡು ಮುಂಜಾನೆ 11:00 ಗಂಟೆಗೆ ಸಭೆಯನ್ನು ಪ್ರಾರಂಭಿಸಲಾಯಿತು.

-
-
-
-
-
-
-

ಕುಲಸಚಿವರು

ಕುಲಪತಿಗಳು

<u>ದಿನಾಂಕ 10.09.2025ರಂದು ಜರುಗುವ ಸಾಧಾರಣ ಸಿಂಡಿಕೇಟ ಸಭೆ</u>

**ಮಾನ್ಯ ಕುಲಪತಿಗಳಿಂದ ಪ್ರಾರಂಭ:**

**ವಿಶ್ವವಿದ್ಯಾಲಯದ ನೂತನ ಹಣಕಾಸು ಅಧಿಕಾರಿಗಳನ್ನು ಸಿಂಡಿಕೇಟ ಸಭೆಗೆ ವಿಶೇಷ ಆಹ್ವಾನಿತರೆಂದು ಹಾಗೂ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರನ್ನು ಸದಸ್ಯರೆಂದು ಸ್ವಾಗತಿಸಲಾಯಿತು.**

ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ: ಆಇ/3/ರಾಲೆಪ/2025 ದಿನಾಂಕ: 02.08.2025ರ ಮೂಲಕ **ಶ್ರೀ. ಪ್ರದೀಪಕುಮಾರ** ಇವರನ್ನು ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 19(1)ರ ಅಡಿಯಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಹಣಕಾಸು ಅಧಿಕಾರಿಗಳ ಹುದ್ದೆಗೆ ಸ್ಥಾನಪನ್ನ/ ಸ್ಥಳ ನಿಯುಕ್ತಿಗೊಳಿಸಿ ಆದೇಶಿಸಲಾಗಿರುತ್ತದೆ. ಅದರಂತೆ ದಿನಾಂಕ:19.08.2025 ರಂದು ಕಾರ್ಯಭಾರವನ್ನು ವಹಿಸಿಕೊಂಡಿದ್ದು ಅವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದಿಂದ ಸ್ವಾಗತಿಸಲಾಯಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಫ್) ರ ಅಡಿಯಲ್ಲಿ ಸಂಯೋಜಿತ ಮಹಾವಿದ್ಯಾಲಯದ ಪ್ರಾಚಾರ್ಯರುಗಳನ್ನು ಜೇಷ್ಠತೆಯ ಅನುಗುಣವಾಗಿ

1. **ಡಾ.(ಶ್ರೀಮತಿ). ಎನ್.ಸಿ. ಪಾಟೀಲ, ಪ್ರಾಚಾರ್ಯರು, ಕೆ.ಎಲ್.ಇ. ಶ್ರೀ. ಮೃತ್ಯುಂಜಯ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಧಾರವಾಡ**
2. **ಡಾ. ಎಚ್. ಎಚ್. ಭಟ್, ಪ್ರಾಚಾರ್ಯರು, ಬಿಜಿವಿಎಸ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಸದಾಶಿವಗಡ.**
3. **ಡಾ. ಬಿ.ಬಿ. ಹೊಳಗುಂದಿ, ಪ್ರಾಚಾರ್ಯರು, ಕೆವಿವಿಎಸ್ ಜಗದ್ಗುರು ಪಂಚಾಕ್ಷರಿ ಶಿಕ್ಷಣ ಮಹಾವಿದ್ಯಾಲಯ, ಗದಗ**

ಇವರುಗಳನ್ನು ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಮಾಡಲಾಗಿದ್ದು ಇವರಿಗೆ ಸಿಂಡಿಕೇಟ ಸಭೆಗೆ ತುಂಬು ಹೃದಯದಿಂದ ಸ್ವಾಗತಿಸಿದರು.

-
-
-
-
-
-
-
-
-
-
-



ಕುಲಸಚಿವರು

ಕುಲಪತಿಗಳು

**ಹುದ್ದೆಯಿಂದ ಬಿಡುಗಡೆಯಾದ ಮತ್ತು ಸಿಂಡಿಕೇಟ ಸದಸ್ಯರುಗಳ ಸದಸ್ಯತ್ವದ ಅವಧಿ ಕೊನೆಗೊಂಡ ಪ್ರಯುಕ್ತ ವಂದನೆ.**

ವಿಶ್ವವಿದ್ಯಾಲಯಕ್ಕೆ ನೂತನ ಹಣಕಾಸು ಅಧಿಕಾರಿ ನಿಯುಕ್ತಿಗೊಂಡಿದ್ದರಿಂದ ಕರ್ನಾಟಕ ವಿಶ್ವವಿದ್ಯಾಲಯದ ಮಾಜಿ ಪ್ರಭಾರಿ ಹಣಕಾಸು ಅಧಿಕಾರಿಗಳಾದ ಡಾ. ಸಿ. ಕೃಷ್ಣಮೂರ್ತಿ ಇವರನ್ನು ಸದರಿ ಹುದ್ದೆಯಿಂದ ಬಿಡುಗಡೆಗೊಂಡಿದ್ದು ಸದರೀಯವರಿಗೆ ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃಧ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಅಧಿನಿಯಮ 2000ರ ಪರಿಚ್ಛೇದ 28(1)(ಎಫ್) ರ ಅಡಿಯಲ್ಲಿ ಸಂಯೋಜಿತ ಮಹಾವಿದ್ಯಾಲಯಗಳ ಪ್ರಾಚಾರ್ಯರ ಜೇಷ್ಠತೆಯ ಅನುಸಾರ ಸಿಂಡಿಕೇಟ ಸದಸ್ಯರೆಂದು ನಾಮನಿರ್ದೇಶನಗೊಂಡಿದ್ದ

1. **ಡಾ. ಎಮ್. ಡಿ. ಒಕ್ಕುಂದ ಪ್ರಾಚಾರ್ಯರು, ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ದಾಂಡೇಲಿ.**
2. **ಡಾ. ಎಮ್. ಬಿ. ಬಾಗಡಿ, ಪ್ರಾಚಾರ್ಯರು, ಸರ್ಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯ, ನವಲಗುಂದ,**
3. **ಡಾ.(ಶ್ರೀಮತಿ). ಎ. ಎಮ್. ನಾಯ್ಕ, ಶಿವಾಜಿ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಕಾರವಾರ.**

ಇವರುಗಳ ಸಿಂಡಿಕೇಟ ಸದಸ್ಯತ್ವ ದಿನಾಂಕ: 04.09.2025 ರಂದು ಕೊನೆಗೊಂಡಿದ್ದು, ವಿಶ್ವವಿದ್ಯಾಲಯದ ಹಾಗೂ ಸಿಂಡಿಕೇಟ ಸದಸ್ಯರುಗಳ ಪರವಾಗಿ ವಿಶ್ವವಿದ್ಯಾಲಯದ ಅಭಿವೃಧ್ಧಿಗಾಗಿ ನೀಡಿದ ಅಮೂಲ್ಯ ಸಲಹೆ, ಸೂಚನೆ ಹಾಗೂ ಸಹಕಾರವನ್ನು ಕೃತಜ್ಞತೆಯಿಂದ ಸ್ಮರಿಸಲಾಯಿತು.

ಸಭೆಯ ಕಲಾಪವನ್ನು ಪ್ರಾರಂಭಿಸಿ, **ದಿನಾಂಕ 12 & 13.05.2025 ರ** ಸಾಮಾನ್ಯ ಸಿಂಡಿಕೇಟ ಸಭೆಯ ನಿರ್ಣಯಗಳ ಮೇಲೆ ಜರುಗಿದ ಕ್ರಮಗಳ ಸಂಕ್ಷಿಪ್ತ ವರದಿಯನ್ನು ವಿವರಿಸಲಾಯಿತು.

-
-
-
-
-
-
-
-
-
-



ಕುಲಸಚಿವರು

ಕುಲಪತಿಗಳು

| 1) | ವಿಷಯ: | ದಿನಾಂಕ 31.07.2025 ರಂದು ಜರುಗಿದ ಸಿಂಡಿಕೇಟ ಸಭೆಯ ನಡಾವಳಿಗಳನ್ನು ದೃಡೀಕರಿಸುವಾಗ ಈ ಕೆಳಗಿನ ನಿರ್ಣಯಗಳನ್ನು ತಿದ್ದುಪಡೆ ಮಾಡಿ, ಸಭೆಯು ಇನ್ನುಳಿದ ಎಲ್ಲ ನಿರ್ಣಯಗಳನ್ನು ಯಥಾವತ್ತಾಗಿ ದೃಡೀಕರಿಸಲಾಯಿತು. |
|---|---|---|

| ಠರಾವು ಸಂಖ್ಯೆ | ದಾಖಲಾದ ನಿರ್ಣಯ | ತಿದ್ದುಪಡೆ ಮಾಡಿದ ನಿರ್ಣಯ |
|---|---|---|
| 18 | ಕರ್ನಾಟಕ ಕಲಾ, ವಿಜ್ಞಾನ ಹಾಗೂ ಸಂಗಿತ ಮಹಾವಿದ್ಯಾಲಯಗಳ ಹಲವು ಖಾಯಂ ಶಿಕ್ಷಕರು, ಅತಿಥಿ ಹಾಗೂ ಸಹಾಯಕ ಉಪನ್ಯಾಸಕರುಗಳು ಇವರು ಸಲ್ಲಿಸಿದ ಪತ್ರ ದಿನಾಂಕ: 14.06.2025 ರಲ್ಲಿ ಮತ್ತು ಶ್ರೀ. ಮಹೇಶ ಹುಲೇನ್ನವರ ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಸಿಂಡಿಕೇಟ ಸದಸ್ಯರು, ಕವಿವಿ, ಧಾರವಾಡ ಇವರು ಸಲ್ಲಿಸಿದ ಪತ್ರವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ದಿನಾಂಕ: 23.06.2025 ರಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ "ಅಕ್ಯಾಡೆಮಿಕ್ ಡೀನ್" ನೇಮಕ ಮಾಡಿರುವುದನ್ನು ರದ್ದುಗೊಳಿಸಿ ಪ್ರಾಚಾರ್ಯರ ನಂತರದ ಜೆಷ್ಠತಾ ಯಾದಿಯಲ್ಲಿರುವವರನ್ನು ಉಪ-ಪ್ರಾಚಾರ್ಯರೆಂದು ನೇಮಿಸಲು ಸಿಂಡಿಕೇಟ್ ಸಭೆಯು ಅನುಮೋದಿಸಿತು. | **ಕರ್ನಾಟಕ ಕಲಾ, ವಿಜ್ಞಾನ ಹಾಗೂ ಸಂಗಿತ ಮಹಾವಿದ್ಯಾಲಯಗಳ ಹಲವು ಖಾಯಂ ಶಿಕ್ಷಕರು, ಅತಿಥಿ ಹಾಗೂ ಸಹಾಯಕ ಉಪನ್ಯಾಸಕರುಗಳು ಇವರು ಸಲ್ಲಿಸಿದ ಪತ್ರ ದಿನಾಂಕ: 14.06.2025 ರಲ್ಲಿ ಮತ್ತು ಶ್ರೀ. ಮಹೇಶ ಹುಲೇನ್ನವರ ಹಾಗೂ ಶ್ರೀ. ಶ್ಯಾಮ ಮಲ್ಲನಗೌಡರ ಸಿಂಡಿಕೇಟ ಸದಸ್ಯರು, ಕವಿವಿ, ಧಾರವಾಡ ಇವರು ಸಲ್ಲಿಸಿದ ಪತ್ರವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ದಿನಾಂಕ: 23.06.2025 ರಲ್ಲಿ ಕರ್ನಾಟಕ ಕಲಾ ಮಹಾವಿದ್ಯಾಲಯ ಹಾಗೂ ಕರ್ನಾಟಕ ವಿಜ್ಞಾನ ಮಹಾವಿದ್ಯಾಲಯಗಳಿಗೆ "ಅಕ್ಯಾಡೆಮಿಕ್ ಡೀನ್" ನೇಮಕ ಮಾಡಿರುವುದನ್ನು ರದ್ದುಗೊಳಿಸುವುದು ಮತ್ತು ಕವಿವಿ ಅಧಿಸೂಚನೆ ಸಂಖ್ಯೆ: KU-Syndicate/2023-24/1690 ದಿನಾಂಕ: 01.12.2023 ರಲ್ಲಿ ಗೌರವಾನ್ವಿತ ಕುಲಾಧಿಪತಿಗಳಿಂದ ಅನುಮೋದನೆಗೊಂಡ ಅನುಶಾಶನದ ಪ್ರಕಾರ ಪ್ರಾಚಾರ್ಯರ ನಂತರದ ಜೆಷ್ಠತಾ ಯಾದಿಯಲ್ಲಿರುವವರನ್ನು ಕಾರ್ಯ ಹೊಂದಾಣಿಕೆ ಮೇರೆಗೆ ಉಪ-ಪ್ರಾಚಾರ್ಯರೆಂದು ನೇಮಿಸುವುದು ಮತ್ತು ಸದರಿಯವರಿಗೆ ಯಾವುದೇ ಆರ್ಥಿಕ ಸೌಲಭ್ಯವನ್ನು ನೀಡಲಾಗುವುದಿಲ್ಲವೆಂದು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |
| 24 | ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಮಹಾವಿದ್ಯಾಲಯಕ್ಕೆ ಸಂಬಂಧಿಸಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ಪರೀಕ್ಷೆ ಫಲಿತಾಂಶದ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಿರುವ ಪ್ರಯುಕ್ತ ದಿನಾಂಕ 13.05.2025ರ ಸಿಂಡಿಕೇಟ್ ಸಭೆಯ ಅಂತಿಮ ನಿರ್ಣಯದಂತೆ ಡಾ.(ಶ್ರೀಮತಿ) | **ಕರ್ನಾಟಕ ವಿಶ್ವವಿದ್ಯಾಲಯದ ಕಾನೂನು ಮಹಾವಿದ್ಯಾಲಯಕ್ಕೆ ಸಂಬಂಧಿಸಿದ 3 ವರ್ಷದ ಕಾನೂನು ಪದವಿಯ 2ನೇ ಸೆಮಿಸ್ಟರಿನ ಪರೀಕ್ಷೆ ಫಲಿತಾಂಶದ ಅಂಕಗಳಲ್ಲಿ ವ್ಯತ್ಯಾಸ ಕಂಡುಬಂದಿರುವ ಪ್ರಯುಕ್ತ ದಿನಾಂಕ 13.05.2025ರ ಸಿಂಡಿಕೇಟ್ ಸಭೆಯ ಅಂತಿಮ ನಿರ್ಣಯದಂತೆ** |



ಕುಲಸಚಿವರು ಕುಲಪತಿಗಳು

| | | | | |
|---|---|---|---|---|
| | | | ಶಶಿರೇಖಾ ಮಳಗಿ ಇವರಿಗೆ ದಿನಾಂಕ: 27.06.2025 ರಂದು ದಂಡ ಶುಲ್ಕ ಭರಿಸಲು ಪತ್ರದ ಮೂಲಕ ತಿಳಿಸಲಾಗಿ ಸದರಿಯವರು ದಂಡ ಶುಲ್ಕ ಭರಿಸುವ ಕುರಿತು ದಿನಾಂಕ: 16.05.2025 ಹಾಗೂ 01.07.2025 ರಂದು ಮನವಿ ಪತ್ರ ನೀಡಿದ್ದು, ಸದರಿಯವರ ವಿನಂತಿ ಪತ್ರ ಕುರಿತು ದಿನಾಂಕ: 04.07.2025 ರಂದು ಮಾನ್ಯ ಕುಲಪತಿಗಳು ಮರುಪರಿಶೀಲನೆ ಸಲುವಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಆದೇಶಿಸಿರುವುದರ ಕುರಿತು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಡಾ.(ಶ್ರೀಮತಿ) ಶಶಿರೇಖಾ ಮಳಗಿ ಇವರಿಗೆ ದಿನಾಂಕ 27.6.2025ರ ನಿರ್ಣಯದ ಪ್ರಕಾರ ದಂಡ ಶುಲ್ಕವನ್ನು ಭರಿಸಲು ಹಾಗೂ ಸದರಿಯವರ ದಂಡವನ್ನು ಭರಿಸುವವರೆಗೆ ಮಹಾವಿದ್ಯಾಲಯದ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳಿಂದ ನಿರ್ಬಂಧಿಸುವುದು ಅವರ ವೇತನ ಬಡ್ತಿ ತಡೆಹಿಡಿಯುವುದು ಹಾಗೂ ಇತರೆ ಸಮಿತಿಗಳಿಗೆ ಸಂಬಂಧಿಸಿದ ಯಾವುದೇ ಕಾರ್ಯಕ್ಕೆ ನಿಯೋಜನೆ ಮಾಡಬಾರದೆಂದು ಸಿಂಡಿಕೇಟ್ ಸಭೆಯು ಅನುಮೋದಿಸಿತು. | **ಡಾ.(ಶ್ರೀಮತಿ) ಶಶಿರೇಖಾ ಮಳಗಿ ಇವರಿಗೆ ದಿನಾಂಕ: 27.06.2025 ರಂದು ದಂಡ ಶುಲ್ಕ ಭರಿಸಲು ಪತ್ರದ ಮೂಲಕ ತಿಳಿಸಲಾಗಿ ಸದರಿಯವರು ದಂಡ ಶುಲ್ಕ ಭರಿಸುವ ಕುರಿತು ದಿನಾಂಕ: 16.05.2025 ಹಾಗೂ 01.07.2025 ರಂದು ಮನವಿ ಪತ್ರ ನೀಡಿದ್ದು, ಸದರಿಯವರ ವಿನಂತಿ ಪತ್ರ ಕುರಿತು ದಿನಾಂಕ: 04.07.2025 ರಂದು ಮಾನ್ಯ ಕುಲಪತಿಗಳು ಮರುಪರಿಶೀಲನೆ ಸಲುವಾಗಿ ಸಿಂಡಿಕೇಟ್ ಸಭೆಯಲ್ಲಿ ಮಂಡಿಸಲು ಆದೇಶಿಸಿರುವುದರ ಕುರಿತು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಡಾ.(ಶ್ರೀಮತಿ) ಶಶಿರೇಖಾ ಮಾಳಗಿ ಇವರಿಗೆ ದಿನಾಂಕ 27.6.2025ರ ನಿರ್ಣಯದ ಪ್ರಕಾರ ದಂಡ ಶುಲ್ಕವನ್ನು ಭರಿಸಲು ಹಾಗೂ ಸದರಿಯವರ ದಂಡವನ್ನು ಭರಿಸುವವರೆಗೆ ಮಹಾವಿದ್ಯಾಲಯದ ಶೈಕ್ಷಣಿಕ ಮತ್ತು ಪರೀಕ್ಷಾ ಕಾರ್ಯಗಳಿಂದ ನಿರ್ಬಂಧಿಸುವುದು ಅವರ ವೇತನ ಬಡ್ತಿ ತಡೆಹಿಡಿಯುವುದು ಹಾಗೂ ಇತರೆ ಸಮಿತಿಗಳಿಗೆ ಸಂಬಂಧಿಸಿದ ಯಾವುದೇ ಕಾರ್ಯಕ್ಕೆ ನಿಯೋಜನೆ ಮಾಡಬಾರದೆಂಬುದರ ಬಗ್ಗೆ ಸಿಂಡಿಕೇಟ್ ಸಭೆಯಲ್ಲಿ ಕೂಲಕುಂಶಷವಾಗಿ ಪರಿಶೀಲಿಸಲು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ಸಭೆಯು ಅನುಮೋದಿಸಿತು.** |
| | | 29 | ಕವಿವಿಯಲ್ಲಿ ಪ್ರಸ್ತುತ ತಾತ್ಕಾಲಿಕ ಸಂಚಿತ/ ಕರಾರಿನ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ವೇತನವನ್ನು ನಿಗದಿಪಡಿಸುವ ಕುರಿತು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಈ ಬಗ್ಗೆ ತಾತ್ಕಾಲಿಕ ಸಂಚಿತ/ ಕರಾರಿನ (Contractual Basis) ವೇತನದ ಆಧಾರದ ಮೇಲೆ ಸುಮಾರು 43 ಹೆಚ್ಚುವರಿ ಸಿಬ್ಬಂದಿಗಳ ಅವಶ್ಯಕತೆಯನ್ನು ಪರಿಶೀಲಿಸಿ ಎಷ್ಟು ಸಿಬ್ಬಂದಿಗಳನ್ನು ಮುಂದುವರೆಸಬೇಕೆಂದು ಮಾನ್ಯ ಕುಲಪತಿಗಳು ಹಾಗೂ ಕುಲಸಚಿವರ ಘಟನೋತ್ತರ ಮಂಜೂರಾತಿ ಪಡೆದು ಮುಂದಿನ ಸಭೆಗೆ ಮಂಡಿಸಲು ಸಿಂಡಿಕೇಟ | **ಕವಿವಿಯಲ್ಲಿ ಪ್ರಸ್ತುತ ತಾತ್ಕಾಲಿಕ ಸಂಚಿತ/ ಕರಾರಿನ ವೇತನದ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಸೇವೆಯನ್ನು ಪಡೆಯುವ ವೇತನವನ್ನು ನಿಗದಿಪಡಿಸುವ ಕುರಿತು ಆಡಳಿತ ಮಂಡಳಿ ಸಭೆಯು ಪರಿಶೀಲಿಸಿ ಈ ಬಗ್ಗೆ ತಾತ್ಕಾಲಿಕ ಸಂಚಿತ/ ಕರಾರಿನ (Contractual Basis) ವೇತನದ ಆಧಾರದ ಮೇಲೆ ಸುಮಾರು 43 ಹೆಚ್ಚುವರಿ ಸಿಬ್ಬಂದಿಗಳ ಅವಶ್ಯಕತೆಯನ್ನು ಪರಿಶೀಲಿಸಿ ಎಷ್ಟು ಸಿಬ್ಬಂದಿಗಳನ್ನು ಮುಂದುವರೆಸಬೇಕೆಂದು ನಿರ್ಣಯಿಸಿ ಮುಂದಿನ ಸಭೆಗೆ ಮಂಡಿಸಲು ಸಿಂಡಿಕೇಟ ಸಭೆಯು ನಿರ್ಣಯಿಸಿತು.** |



ಕುಲಸಚಿವರು

ಕುಲಪತಿಗಳು

| | | |
|---|---|---|
| | ಸಭೆಯು ನಿರ್ಣಯಿಸಿತು. | ಮುಂದುವರೆದು, ಸಂಚಿತ ವೇತನದಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲ ಸಿಬ್ಬಂದಿಗಳ ಸಂಖ್ಯೆಯನ್ನು ಅವಶ್ಯಕತೆಗೆ ಅನುಗುಣವಾಗಿ KTTP ನಿಯಮಾವಳಿಗಳ ಪ್ರಕಾರ ಸೇವೆಯನ್ನು ಪಡೆಯುವ ಷರತ್ತುಗೊಳಪಟ್ಟು ವಿಶ್ವವಿದ್ಯಾಲಯದ ಕಾರ್ಯಗಳನ್ನು ತೂಗಿಸುವ ದೃಷ್ಠಿಯಿಂದ ಸದರಿ ಸಿಬ್ಬಂದಿಗಳಿಗೆ ಅಕ್ಟೋಬರ-2025ರ ತಿಂಗಳವರೆಗೆ ವೇತನವನ್ನು ಮಂಜೂರು ಮಾಡಲು ಸಿಂಡಿಕೇಟ್ ಸಭೆಯು ತೀರ್ಮಾನಿಸಿತು. |
| 34 | ಕರ್ನಾಟಕ ವಿಶ್ವವಿದ್ಯಾಲಯ / ಕರ್ನಾಟಕ ಮಹಾವಿದ್ಯಾಲಯಗಳ ಅತಿಥಿ/ ಸಹಾಯಕ ಉಪನ್ಯಾಸಕರ ಸಂಘದ ಬೇಡಿಕೆಗಳ ಪರಿಹಾರಾತ್ಮಕ ಕ್ರಮದ ಕುರಿತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಿಂಡಿಕೇಟ ಉಪಸಮಿತಿ ನೀಡಿದ ಮುಚ್ಚಿದ ಲಕೋಟೆಯಲ್ಲಿರುವ ವರದಿಯನ್ನು ಸಭೆಯಲ್ಲಿ ತೆರೆದು ಓದಲಾಯಿತು. ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಕ್ರಮವಹಿಸಲು ಸಿಂಡಿಕೇಟ ನಿರ್ಣಯಿಸಿತು.<br>1) ವಿಶ್ವವಿದ್ಯಾಲಯದ ಅತಿಥಿ/ ಸಹಾಯಕ ಉಪನ್ಯಾಸಕರು ಎಂಬ ನಾಮಕರಣವನ್ನು ಪೂರ್ಣಕಾಲಿಕ ಉಪನ್ಯಾಸಕರು ಮತ್ತು ಅರೇ ಕಾಲಿಕ ಉಪನ್ಯಾಸಕರು ಎಂದು ಬದಲಾವಣೆ ಮಾಡುವುದು.<br>2) ಅ) PG ಉಪನ್ಯಾಸಕರಿಗೆ ರೂ.30,000/-<br>ಬ) PG/NET or PG/Ph.D/ ಉಪನ್ಯಾಸಕರಿಗೆ ರೂ.32,000/-<br>ಕ) PG/NET/Ph.D ಉಪನ್ಯಾಸಕರಿಗೆ ರೂ.35,000/-<br>3) 2025-26ನೇ ಸಾಲಿಗೆ ಜಾರಿಗೆ ಬರುವಂತೆ ಸ್ನಾತಕ/ ಸ್ನಾತಕೋತ್ತರ ಪೂರ್ಣಕಾಲಿಕ ಮತ್ತು ಅರೇ ಕಾಲಿಕ ಅತಿಥಿ ಉಪನ್ಯಾಸಕರಿಗೆ 10 ತಿಂಗಳ ಅವಧಿಗೆ ನಿಗದಿಪಡಿಸುವುದು.<br>4) ಸದರಿ ಉಪನ್ಯಾಸಕರ ಸೇವೆ ಪಡೆಯಲು ಅರ್ಜಿ ಆಹ್ವಾನಿಸಿ, ಸಂರ್ಧಶನದ ಮೂಲಕ ಮೆರಿಟ್ಸ್/ ರೋಸ್ಟರ ಅನುಗುಣವಾಗಿ | **ಕರ್ನಾಟಕ ವಿಶ್ವವಿದ್ಯಾಲಯ / ಕರ್ನಾಟಕ ಮಹಾವಿದ್ಯಾಲಯಗಳ ಅತಿಥಿ/ ಸಹಾಯಕ ಉಪನ್ಯಾಸಕರ ಸಂಘದ ಬೇಡಿಕೆಗಳ ಪರಿಹಾರಾತ್ಮಕ ಕ್ರಮದ ಕುರಿತು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಿಂಡಿಕೇಟ ಉಪಸಮಿತಿ ನೀಡಿದ ಮುಚ್ಚಿದ ಲಕೋಟೆಯಲ್ಲಿರುವ ವರದಿಯನ್ನು ಸಭೆಯಲ್ಲಿ ತೆರೆದು ಓದಲಾಯಿತು. ಈ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಈ ಕೆಳಗಿನಂತೆ ಕ್ರಮವಹಿಸಲು ಸಿಂಡಿಕೇಟ ನಿರ್ಣಯಿಸಿತು.<br>1) ವಿಶ್ವವಿದ್ಯಾಲಯದ ಅತಿಥಿ/ ಸಹಾಯಕ ಉಪನ್ಯಾಸಕರು ಎಂಬ ನಾಮಕರಣವನ್ನು ಪೂರ್ಣಕಾಲಿಕ ಅತಿಥಿ ಉಪನ್ಯಾಸಕರು ಮತ್ತು ಅರೇ ಕಾಲಿಕ ಅತಿಥಿ ಉಪನ್ಯಾಸಕರು ಎಂದು ಬದಲಾವಣೆ ಮಾಡುವುದು.<br><u>ಪೂರ್ಣಾವಧಿ ಅತಿಥಿ ಉಪನ್ಯಾಸಕರ ಸಂಭಾವನೆ:</u><br>2)ಅ) PG ಸ್ನಾತಕೋತ್ತರ ವಿದ್ಯಾರ್ಹತೆ ಹೊಂದಿದ ಉಪನ್ಯಾಸಕರಿಗೆ ರೂ.30,000/-<br>ಬ) PG and NET or PG and Ph.D ಉಪನ್ಯಾಸಕರಿಗೆ ರೂ.32,000/-<br>ಕ) PG and NET and Ph.D ಉಪನ್ಯಾಸಕರಿಗೆ ರೂ.35,000/-<br>3) 2025-26ನೇ ಸಾಲಿಗೆ ಜಾರಿಗೆ ಬರುವಂತೆ ಸ್ನಾತಕ/ ಸ್ನಾತಕೋತ್ತರ ಪೂರ್ಣಕಾಲಿಕ ಮತ್ತು ಅರೇ ಕಾಲಿಕ ಅತಿಥಿ ಉಪನ್ಯಾಸಕರಿಗೆ 10 ತಿಂಗಳ ಅವಧಿಗೆ ನಿಗದಿಪಡಿಸುವುದು.** |



ಕುಲಸಚಿವರು ಕುಲಪತಿಗಳು

| | | | | |
|---|---|---|---|---|
| | | | ಮಾಡತಕ್ಕದ್ದು.<br>5) ಸಂದರ್ಶನದ ನಂತರ ಆಯ್ಕೆಯಾಗುವ ಉಪನ್ಯಾಸಕರನ್ನು ಕ್ಯಾಲೆಂಡರ ಆಪ್ ಇವೆಂಟ್ಸ್ ತಕ್ಕಂತೆ ಪೂರ್ವದಲ್ಲಿ ಮತ್ತು 10 ತಿಂಗಳ ನಂತರ ಅವಧಿಯಲ್ಲಿ ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸುವ ಗೌರವಧನಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.<br>6) ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳು/ ಸ್ನಾತಕೋತ್ತರ ವಿಭಾಗಗಳಿಗೆ ವಾರ್ಷಿಕ ವೇಳಾಪಟ್ಟಿಯಂತೆ (ಕ್ಯಾಲೆಂಡರ್ ಆಪ್ ಇವೆಂಟ್ಸ್) ಪ್ರಾರಂಭವಾಗುವ ದಿನಾಂಕದ ಪೂರ್ವದಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಸಿ ಸದರಿಯವರಿಗೆ ಆದೇಶದ ಪ್ರತಿಗಳನ್ನು ನೀಡುವ ಕುರಿತು ಕ್ರಮಗಕ್ಕೆಗೊಳ್ಳುವುದು.<br>7) ಕರ್ನಾಟಕ ಕಲಾ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಪಿ 137 ಎಸ್‌ಇಎಸ್ 2025 ದಿನಾಂಕ: 15.05.2025ರ ಸೂತ್ರೋಲೆಯ ಪ್ರಕಾರ ರೂ.14,000/- ಗಳನ್ನು ನೀಡಲು ಕ್ರಮ ಕೈಗೊಳ್ಳಲಾಯಿತು. | **4) ಸದರಿ ಉಪನ್ಯಾಸಕರ ಸೇವೆ ಪಡೆಯಲು ಅರ್ಜಿ ಆಹ್ವಾನಿಸಿ, ಸಂರ್ಧಶನದ ಮೂಲಕ ಮೆರಿಟ್ಸ್/ ರೋಸ್ಟರ ಅನುಗುಣವಾಗಿ ಮಾಡತಕ್ಕದ್ದು.**<br>**5) ಸಂದರ್ಶನದ ನಂತರ ಆಯ್ಕೆಯಾಗುವ ಉಪನ್ಯಾಸಕರನ್ನು ಕ್ಯಾಲೆಂಡರ ಆಪ್ ಇವೆಂಟ್ಸ್ ತಕ್ಕಂತೆ ಪೂರ್ವದಲ್ಲಿ ಮತ್ತು 10 ತಿಂಗಳ ನಂತರ ಅವಧಿಯಲ್ಲಿ ವಿವಿಧ ಪರೀಕ್ಷಾ ಕಾರ್ಯಗಳಲ್ಲಿ ವಿಶ್ವವಿದ್ಯಾಲಯ ನಿಗದಿಪಡಿಸುವ ಗೌರವಧನಗಳಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸತಕ್ಕದ್ದು.**<br>**6) ಕರ್ನಾಟಕ ವಿಶ್ವವಿದ್ಯಾಲಯದ ಘಟಕ ಮಹಾವಿದ್ಯಾಲಯಗಳು/ ಸ್ನಾತಕೋತ್ತರ ವಿಭಾಗಗಳಿಗೆ ವಾರ್ಷಿಕ ವೇಳಾಪಟ್ಟಿಯಂತೆ (ಕ್ಯಾಲೆಂಡರ್ ಆಪ್ ಇವೆಂಟ್ಸ್) ಪ್ರಾರಂಭವಾಗುವ ದಿನಾಂಕದ ಪೂರ್ವದಲ್ಲಿ ಎಲ್ಲ ಪ್ರಕ್ರಿಯೆಗಳನ್ನು ಪೂರ್ಣಗೊಳಸಿ ಸದರಿಯವರಿಗೆ ಆದೇಶದ ಪ್ರತಿಗಳನ್ನು ನೀಡುವ ಕುರಿತು ಕ್ರಮಕೈಗೊಳ್ಳುವುದು.**<br>**7) ಕರ್ನಾಟಕ ಕಲಾ ಮತ್ತು ವಿಜ್ಞಾನ ಪದವಿ ಪೂರ್ವ ಮಹಾವಿದ್ಯಾಲಯಗಳಲ್ಲಿ ಅತಿಥಿ ಉಪನ್ಯಾಸಕರುಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಇಪಿ 137 ಎಸ್‌ಇಎಸ್ 2025 ದಿನಾಂಕ: 15.05.2025ರ ಸೂತ್ರೋಲೆಯ ಪ್ರಕಾರ ಪೂರ್ಣಾವಧಿ ಅತಿಥಿ ಉಪನ್ಯಾಸಕರಿಗೆ ವಾರಕ್ಕೆ 20 ಗಂಟೆಗಳ ಕಾರ್ಯಭಾರಕ್ಕೆ ತಿಂಗಳಿಗೆ ರೂ.28,000/-ಗಳನ್ನು ಹಾಗೂ ಅರೇಕಾಲಿಕ ಅತಿಥಿ ಉಪನ್ಯಾಸಕರಿಗೆ ವಾರಕ್ಕೆ 10 ಗಂಟೆಗಳ ಕಾರ್ಯಭಾರಕ್ಕೆ ತಿಂಗಳಿಗೆ ರೂ.14,000/- ಗಳನ್ನು ಮೀರದಂತೆ ನೀಡಲು ಕ್ರಮ ಕೈಗೊಳ್ಳಲು ಸಿಂಡಿಕೇಟ್ ಸಭೆಯು ಅನುಮೋದಿಸಿತು.** |



ಕುಲಸಚಿವರು

ಕುಲಪತಿಗಳು

| | | |
|---|---|---|
| 2) | ವಿಷಯ-: | ಡಾ.ಕೆ.ಎಮ್.ಹೊಸಮನಿ, ಹಿರಿಯ ಪ್ರಾಧ್ಯಾಪಕರು (ನಿವೃತ್ತ) ಇವರು ತಮ್ಮ ಮೇಲೆ ವಿಧಿಸಲಾದ ಎಲ್ಲ ದಂಡನೆಗಳನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಬೆಳಕಿನಡಿಯಲ್ಲಿ ಮತ್ತು ಇಲಾಖಾ ವಿಚರಣಾ ವರದಿ ಆಧಾರದನುಸಾರ ಆಡಳಿತ ಮಂಡಳಿ ಸಭೆಗಳ ನಿರ್ಣಯಗಳ ಪ್ರಕಾರ ಹಿಂಪಡೆಯಲಾಗಿರುವುದರಿಂದ ತಾವು ಆರೋಪಮುಕ್ತರಾಗಿರುವುದಾಗಿ ಹೇಳಿ, ದಿನಾಂಕ.13.07.2020 ರ ಈ ಕಚೇರಿ ಪತ್ರ ಸಂಖ್ಯೆ.ಕವಿವಿ/ಸಿಆಸುವಿ/ಶಿಕ್ಷಕ-02/2020/1231 ನ್ನು ಹಿಂಪಡೆದು ಅವರನ್ನು ನಿರ್ದೋಷಿ/ ಆರೋಪಮುಕ್ತನೆಂದು ಪರಿಗಣಿಸಿ ಆದೇಶ ಹೊರಡಿಸಬೇಕೆಂದು ವಿನಂತಿಸಿದ ವಿಷಯವನ್ನು ಪರಿಶೀಲಿಸುವ ಕುರಿತು. |
| <u>ನಿರ್ಣಯ</u> | | **ಡಾ. ಕೆ.ಎಮ್. ಹೊಸಮನಿ, ಹಿರಿಯ ಪ್ರಾಧ್ಯಾಪಕರು (ನಿವೃತ್ತ) ಇವರು ತಮ್ಮ ಮೇಲೆ ವಿಧಿಸಲಾದ ಎಲ್ಲ ದಂಡನೆಗಳನ್ನು ಮಾನ್ಯ ಉಚ್ಚ ನ್ಯಾಯಾಲಯದ ಆದೇಶದ ಬೆಳಕಿನಡಿಯಲ್ಲಿ ಮತ್ತು ಇಲಾಖಾ ವಿಚಾರಣಾ ವರದಿ ಆಧಾರದನುಸಾರ ಆಡಳಿತ ಸಭೆಗಳ ನಿರ್ಣಯಗಳ ಪ್ರಕಾರ ಹಿಂಪಡೆಯಲಾಗಿರುವುದರಿಂದ ತಾವು ಆರೋಪಮುಕ್ತರಾಗಿರುವುದಾಗಿ ಹೇಳಿ, ದಿನಾಂಕ: 13.07.2020ರ ಈ ಕಚೇರಿ ಪತ್ರ ಸಂಖ್ಯೆ. ಕವಿವಿ/ಸಿಆಸುವಿ/ಶಿಕ್ಷಕ-02/2020/1231ನ್ನು ಹಿಂಪಡೆದು ಅವರನ್ನು ನಿರ್ದೋಷಿ/ ಆರೋಪಮುಕ್ತನೆಂದು ಪರಿಗಣಿಸಿ ಆದೇಶ ಹೊರಡಿಸಬೇಕೆಂದು ವಿನಂತಿಸಿದ ಹಿನ್ನೆಲೆಯಲ್ಲಿ ಸಿಂಡಿಕೇಟ ಸಭೆಯು, ಸದರ ವಿಷಯವಾಗಿ ಈ ಹಿಂದೆ ಸಿಂಡಿಕೇಟ ಸಭೆಗಳು ಕೈಗೊಂಡ ನಿರ್ಣಯಗಳನ್ನು ಹಾಗೂ ಕಾನೂನು ಸಲಹೆಗಾರರು ನೀಡಿದ ಅಭಿಪ್ರಾಯವನ್ನು ಪರಿಶೀಲಿಸಲಾಗಿ, ಸದರಿಯವರ ಪ್ರಕರಣದ ವಿವರವಾದ ದಾಖಲೆಗಳನ್ನು ಪರಿಶೀಲಿಸಿ ವರದಿ ಸಲ್ಲಿಸಲು ಸಮಿತಿ ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರವನ್ನು ನೀಡಲು ತೀರ್ಮಾನಿಸಿತು.** |
| 3) | ವಿಷಯ-: | ಕನಕದಾಸ ಶಿಕ್ಷಣ ಸಮಿತಿ ಗದಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ರದ್ದಾದ ಪರೀಕ್ಷಾ ಕೇಂದ್ರವನ್ನು ಮರಳಿ ನೀಡುವ ಕುರಿತು ಒಟ್ಟು 8 ಜನ ಸಿಂಡಿಕೇಟ್ ಸದಸ್ಯರುಗಳು ದಿನಾಂಕ: 31.07.2025 ರಂದು ಸಭೆಯಲ್ಲಿ ಸಲ್ಲಿಸಿದ ಪ್ರಸ್ತಾಯನೆಯನ್ನು ಸಿಂಡಿಕೇಟ್ ಸಭೆಯ ಮರು ಪರಿಶೀಲನೆಗಾಗಿ ಮಂಡಿಸುವ ಕುರಿತು. |
| <u>ನಿರ್ಣಯ</u> | | **ಕನಕದಾಸ ಶಿಕ್ಷಣ ಸಮಿತಿ ಗದಗ ಸ್ನಾತಕೋತ್ತರ ಅಧ್ಯಯನ ಕೇಂದ್ರದ ರದ್ದಾದ ಪರೀಕ್ಷಾ ಕೇಂದ್ರವನ್ನು ಮರಳಿ ನೀಡುವ ಕುರಿತು ಒಟ್ಟು 8 ಜನ ಸಿಂಡಿಕೇಟ್ ಸದಸ್ಯರುಗಳು ದಿನಾಂಕ 31.07.2025 ರಂದು ಸಭೆಯಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಮರು ಪರಿಶೀಲಿಸಿ ಸಮಿತಿಯನ್ನು ರಚಿಸಲು ಮಾನ್ಯ ಕುಲಪತಿಗಳಿಗೆ ಅಧಿಕಾರ ನೀಡಲು ತೀರ್ಮಾನಿಸಿತು. ಮುಂದುವರೆದು, ಸಮಿತಿಯು ಸದರ ಮಹಾವಿದ್ಯಾಲಯಕ್ಕೆ ಬೇಟಿ ನೀಡಿ ವಿವರಣೆಯನ್ನು ಪಡೆದು ಮುಂಬರುವ ಸಿಂಡಿಕೇಟ್ ಸಭೆಗೆ ವರದಿಯನ್ನು ಮಂಡಿಸಲು ಸಭೆಯು ತಿರ್ಮಾನಿಸಲಾಯಿತು.** |
| 4) | ವಿಷಯ-: | ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಮಾನ್ಯ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಅನುಮೋದಿಸುವ ಕುರಿತು. |
| <u>ನಿರ್ಣಯ</u> | | **ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗಕ್ಕೆ ಮುಖ್ಯಸ್ಥರನ್ನು ನೇಮಕ ಮಾಡಿ ಕುಲಪತಿಗಳು ಕೈಕೊಂಡ ಕ್ರಮವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಅನುಮೋದಿಸಿತು.** |



ಕುಲಸಚಿವರು ಕುಲಪತಿಗಳು

| | | |
|---|---|---|
| 5) | ವಿಷಯ-: | ಸರಕಾರದ ಆದೇಶದಂತೆ ಅನ್ಯ ವಿಶ್ವವಿದ್ಯಾಲಯಗಳಿಗೆ ನಿಯೋಜನೆಗೊಂಡ ಪ್ರಾಧ್ಯಾಪಕರುಗಳಿಗೆ ಪಿಎಚ್.ಡಿ ಖಾಲಿ ಸ್ಥಾನಗಳನ್ನು ನೀಡಲು ಪರಿಶೀಲನೆ ಕುರಿತು. |
| ನಿರ್ಣಯ | | **ಸರ್ಕಾರದ ಆದೇಶದಂತೆ ಕ.ವಿ.ವಿಯಿಂದ ಅನ್ಯ ವಿಶ್ವವಿದ್ಯಾಲಯಗಳಿಗೆ ನಿಯೋಜನೆಗೊಂಡ ಪ್ರಾಧ್ಯಾಪಕರುಗಳಿಗೆ ಪಿಎಚ್.ಡಿ ಪ್ರವೇಶ ಖಾಲಿ ಸ್ಥಾನಗಳನ್ನು ನೀಡುವ ಕುರಿತಂತೆ ವಿದ್ಯಾರ್ಥಿಗಳಿಗೆ ಪ್ರಾಯೋಗಿಕವಾಗಿ ಸಂಶೋಧನಾ ಕಾರ್ಯಕೈಗೊಳ್ಳಲು ತೊಂದರೆಯಾಗುವ ಹಿನ್ನಲೆಯಲ್ಲಿ ಸದರ ಖಾಲಿ ಸ್ಥಾನಗಳನ್ನು ಪರಿಗಣಿಸಲು ಅವಕಾಶವಿರುವುದಿಲ್ಲವೆಂದು ದಿನಾಂಕ 10.07.2025 ರಂದು ಜರುಗಿದ ಡೀನರ ಸಭೆಯಲ್ಲಿ ಕೈಗೊಂಡ ನಿರ್ಣಯವನ್ನು ಸಿಂಡಿಕೇಟ ಸಭೆಯು ಪರಿಶೀಲಿಸಿ ಚರ್ಚಿಸಿ ಅನುಮೋದಿಸಿತು.** |
| 6) | ವಿಷಯ-: | ಶ್ರೀಮತಿ ಸಿದ್ದಮ್ಮ ಅಂಬಿಗೇರ, ಕನ್ನಡ ವಿಷಯದ ಸಂಶೋಧನಾ ವಿದ್ಯಾರ್ಥಿನಿ ಇವರು ಪೂರ್ಣಾವಧಿ ಪ್ರವೇಶ ಸ್ವರೂಪದ ವಿದ್ಯಾರ್ಥಿನಿಯಾಗಿದ್ದುಕೊಂಡೇ ಬೇರೆಡೆ ಸೇವೆಸಲ್ಲಿಸಿ ಸಂಭಾವನೆ ಪಡೆದ ಬಗ್ಗೆ ಅಲ್ಲದೇ, ಇದೇ ಅವಧಿಯಲ್ಲಿಯೇ ಯುಆರ್ಎಸ್/ಜೆಆರ್ಎಫ್ ಶಿಷ್ಯವೇತನ ಪಡೆದ ಬಗ್ಗೆ ವಿಶ್ವವಿದ್ಯಾಲಯಕ್ಕೆ ದೂರು ದಾಖಲಾದ ಹಿನ್ನಲೆಯಲ್ಲಿ ಸತ್ಯಶೋಧನಾ ಸಮಿತಿಯು ನೀಡಿದ ವರದಿಯ ಮೇಲೆ ಸಿಂಡಿಕೇಟ್ ಸಭೆಯ ನಿರ್ಣಯದಂತೆ ರಚಿಸಿದ ಸಮಿತಿಯು ಸಲ್ಲಿಸಿದ ವರದಿಯನ್ನು ಪರಿಶೀಲನೆ ಕುರಿತು. |
| ನಿರ್ಣಯ | | **ಶ್ರೀಮತಿ. ಸಿದ್ದಮ್ಮ ಅಂಬಿಗೇರ, ಕನ್ನಡ ವಿಷಯದ ಸಂಶೋಧನಾ ವಿದ್ಯಾರ್ಥಿನಿ ಇವರು ಪೂರ್ಣಾವಧಿ ಪ್ರವೇಶ ಸ್ವರೂಪದ ವಿದ್ಯಾರ್ಥಿನಿಯಾಗಿದ್ದುಕೊಂಡೇ ಬೇರೆಡೆ ಸೇವೆಸಲ್ಲಿಸಿ ಸಂಭಾವನೆ ಪಡೆದ ಬಗ್ಗೆ ಅಲ್ಲದೇ, ಇದೇ ಅವಧಿಯಲ್ಲಿಯೇ ಯುಆರ್ಎಸ್/ಜೆಆರ್ಎಫ್ ಶಿಷ್ಯವೇತನ ಪಡೆದ ಬಗ್ಗೆ ವಿಶ್ವವಿದ್ಯಾಲಯಕ್ಕೆ ದೂರು ದಾಖಲಾದ ಹಿನ್ನಲೆಯಲ್ಲಿ ಸತ್ಯಶೋಧನಾ ಸಮಿತಿಯು ನೀಡಿದ ವರದಿಯ ಮೇಲೆ ಸಿಂಡಿಕೇಟ್ ಸಭೆಯ ನಿರ್ಣಯದಂತೆ ರಚಿಸಿದ ಸಮಿತಿಯು ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸಿದ ವರದಿಯನ್ನು ಸಿಂಡಿಕೇಟ ಸಭೆಯಲ್ಲಿ ತೆರೆದು ಓದಲಾಗಿ ಸಂಶೋಧನಾ ಮಾರ್ಗದರ್ಶಕರು ಹಾಗೂ ವಿದ್ಯಾರ್ಥಿನಿಗೆ ನೋಟಿಸ್ ನೀಡಲು ಸಿಂಡಿಕೇಟ್ ಸಭೆಯು ತಿರ್ಮಾನಿಸಿತು.** |



ಕುಲಸಚಿವರು

ಕುಲಪತಿಗಳು

| | | |
|---|---|---|
| 7) | ವಿಷಯ-: | ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ B.Com ಪದವಿಯ Banking and Insurance Specialization ವಿಷಯಕ್ಕೆ ಸ್ಥಾಪಿಸಲಾದ ಸುವರ್ಣಪದಕ ಮತ್ತು ನಗದು ಪಾರಿತೋಷಕಗಳನ್ನು ಪ್ರದಾನ ಮಾಡಲು ಪ್ರಸ್ತುತ ಚಾಲ್ತಿಯಲ್ಲಿರುವ NEP ಪಠ್ಯಕ್ರಮದಂತೆ ವಿಷಯಗಳ ಶಿರೋನಾಮ ಬದಲಾವಣೆಗೊಂಡಿದ್ದರಿಂದ ಸುವರ್ಣಪದಕ ಮತ್ತು ನಗದು ಪಾರಿತೋಷಕಗಳ ಚಾಲ್ತಿಯಿರುವ ನಿಯಮಗಳಲ್ಲಿ ಮಾರ್ಪಾಡು ಮಾಡಿಕೊಳ್ಳಲು ಸಿಂಡಿಕೇಟ ಸಭೆಯ ಅನುಮೋದನೆಗಾಗಿ ಮಂಡಿಸುವ ಕುರಿತು. |
| <u>ನಿರ್ಣಯ</u> | | **ಕರ್ನಾಟಕ ವಿಶ್ವವಿದ್ಯಾಲಯದ ಸ್ನಾತಕ B.Com ಪದವಿಯ Banking and Insurance Specialization ವಿಷಯಕ್ಕೆ ಸ್ಥಾಪಿಸಲಾದ ಸುವರ್ಣಪದಕ ಮತ್ತು ನಗದು ಪಾರಿತೋಷಕಗಳನ್ನು ಪ್ರದಾನ ಮಾಡಲು ಪ್ರಸ್ತುತ ಚಾಲ್ತಿಯಲ್ಲಿರುವ NEP ಪಠ್ಯಕ್ರಮದಂತೆ ವಿಷಯಗಳ ಶಿರೋನಾಮ ಬದಲಾವಣೆಗೊಂಡಿದ್ದರಿಂದ ಸುವರ್ಣಪದಕ ಮತ್ತು ನಗದು ಪಾರಿತೋಷಕಗಳನ್ನು ಈ ಕೆಳಗಿನ ವಿಷಯಗಳಿಗೆ ಮಾರ್ಪಾಡು ಮಾಡಿಕೊಳ್ಳಲು ಸಿಂಡಿಕೇಟ ಸಭೆಯು ಅನುಮೋದಿಸಿತು.** |

| ಅ. ನಂ | ಸುವರ್ಣ ಪದಕ ಮತ್ತು ಪಾರಿತೋಷಕಗಳು | ಪದವಿ | ವಿಷಯ (Subject) (V and VI Semester) |
|---|---|---|---|
| 1 | 1) Rao Bahaddur K R Walvekar Gold Medal<br>2) Bharat Ratna Sir. M Vishweshwaraih State Bank of Mysore Cash Prize<br>3) Syndicate Bank Golden Jubilee Fund Prize | B.Com | **a) Banking Law & Practice**<br>**b) Insurance Law & Practice** |
| | | | **a) Banking in India**<br>**b) Insurance in India** |

| | | |
|---|---|---|
| 8) | ವಿಷಯ-: | ಡಾ.(ಶ್ರೀಮತಿ) ಶ್ರೀದೇವಿ ಪಿ.ಜಿ. ಇವರ ನೇಮಕಾತಿ ವಿಷಯವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯ, ನವದೆಹಲಿ ಇಲ್ಲಿ ದಾಖಲಿಸಿದ (ಎಸ್.ಎಲ್.ಎ.ನಂ.9581/2022) ಗೆ ಸಂಬಂಧಿಸಿದ ತಡೆಯಾಜ್ಞೆ ಆದೇಶದಂತೆ ಸದರಿಯವರನ್ನು ಸ್ನಾತಕೋತ್ತರ ಇಂಗ್ಲೀಷ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಮುಂದುವರಿಸಿರುವ ಕುರಿತು ಮಾನ್ಯ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿ ಸ್ಥಿರೀಕರಣಕ್ಕಾಗಿ ಮಂಡಿಸುವ ಕುರಿತು. |
| <u>ನಿರ್ಣಯ</u> | | **ಡಾ. (ಶ್ರೀಮತಿ). ಶ್ರೀದೇವಿ ಪಿ. ಜಿ. ಇವರ ನೇಮಕಾತಿ ವಿಷಯವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯ, ನವ ದೆಹಲಿ ಇಲ್ಲಿ ದಾಖಲಿಸಿದ (ಎಸ್.ಎಲ್.ಎ.ನಂ. 9581/2022)ಗೆ ಸಂಬಂಧಿಸಿದ ತಡೆಯಾಜ್ಞೆ ಆದೇಶದಂತೆ ಸದರಿಯವರನ್ನು ಸ್ನಾತಕೋತ್ತರ ಇಂಗ್ಲಿಷ ಅಧ್ಯಯನ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಪ್ರಾಧ್ಯಾಪಕ ಹುದ್ದೆಯಲ್ಲಿ ಮುಂದುವರೆಸಿರುವ ಕುರಿತು ಮಾನ್ಯ ಕುಲಪತಿಗಳು ತೆಗೆದುಕೊಂಡ ಕ್ರಮವನ್ನು ಆಡಳಿತ ಮಂಡಳಿಯು ಸ್ಥಿರೀಕರಿಸಿತು.** |

ಕುಲಸಚಿವರು

ಕುಲಪತಿಗಳು

| | | |
|---|---|---|
| 9) | ವಿಷಯ-: | ಕರ್ನಾಟಕ ವಿಶ್ವವಿದ್ಯಾಲಯದ 2024-2025 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಸಿಂಡಿಕೇಟ ಸಭೆಯ ಅನುಮೋದನೆ ಕುರಿತು. |
| ನಿರ್ಣಯ | | **ಕರ್ನಾಟಕ ವಿಶ್ವವಿದ್ಯಾಲಯದ 2024-2025 ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳನ್ನು ಹಣಕಾಸು ಅಧಿಕಾರಿಯವರು ಮಂಡಿಸಿದ್ದನ್ನು ಸಿಂಡಿಕೇಟ ಸಭೆಯು ಪರೀಶೀಲಿಸಿ ಅನುಮೋದಿಸಿತು.** |
| 10) | ವಿಷಯ-: | ಬಿಓಎ ಶಿಫಾರಸ್ಸಿನನ್ವಯ ಕರ್ನಾಟಕ ವಿಶ್ವವಿದ್ಯಾಲಯದ ಬೋಧಕರುಗಳಿಗೆ ಯುಜಿಸಿ ಸಿಎಎಸ್ ಅಡಿಯಲ್ಲಿ ಬೋಧಕರುಗಳ ಪದೋನ್ನತಿ ವಿಷಯವನ್ನು ಪರಿಗಣಿಸುವ ಕುರಿತು. |
| ನಿರ್ಣಯ | | **ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಘಟಕ ಮಹಾವಿದ್ಯಾಲಯಗಳ ಬೋದಕ ಸಿಬ್ಬಂದಿಗಳಿಗೆ ಯುಜಿಸಿ ಸಿಎಎಸ್ ಅಡಿಯಲ್ಲಿ ಬಿಓಎ ಮಂಡಳಿಯು ಸಲ್ಲಿಸಿದ ಮುಚ್ಚಿದ ಲಕೋಟೆಯನ್ನು ತೆರೆದು ಓದಲಾಗಿ ಅದರ ಶಿಫಾರಸ್ಸುಗಳ ಅನ್ವಯ ಪದೋನ್ನತಿ ನೀಡಲು ಕ್ರಮವಹಿಸುವಂತೆ ಸಿಂಡಿಕೇಟ್ ಸಭೆಯು ಸುದೀರ್ಘವಾಗಿ ಪರಿಶೀಲಿಸಿ ಅನುಮೋದಿಸಿತು.**<br><br>**ಮುಂದುವರೆದು, ಪದೋನ್ನತಿ ಹೊಂದಿದ ಬೋಧಕರಿಗೆ ಸ್ಥಾನೀಕರಣ ಸೌಲಭ್ಯವನ್ನು ಸದರಿಯವರು ಸಿ.ಎ.ಎಸ್. ಅಡಿ (Career Advancement Scheme) ಸ್ಥಾನೀಕರಣಕ್ಕೆ ಅರ್ಹತೆ ಹೊಂದಿದ ದಿನಾಂಕದಿಂದ ಅರ್ಹತಾ ಅವಧಿಯನ್ನು ಪರಿಗಣಿಸುವಂತೆ, ಹಾಗೂ ಸ್ಥಾನೀಕರಣಕ್ಕೆ ಸಂಬಂಧಿಸಿದ ವೇತನ ನಿಗದಿಕರಣದ ಆರ್ಥಿಕ ಸೌಲಭ್ಯಗಳನ್ನು ಸ್ಥಾನೀಕರಣ ಆದೇಶ ಹೊರಡಿಸಿದ ದಿನಾಂಕದಿಂದ ಭವಿಷ್ಯವರ್ತಿಯಾಗಿ (The Monetary benefit on grant of CAS shall be Prospective from the date of issue of the order) ಮಂಜೂರು ಮಾಡಲು ಠರಾಯಿಸಿತು.** |
| 11) | ವಿಷಯ-: | ಯುವ ಬೋಧಕ ಸಿಬ್ಬಂದಿಗಳಿಗೆ ಪಿಎಚ್.ಡಿ. ಮಾರ್ಗದರ್ಶನ ಮಾಡಲು ಅವಕಾಶ ನೀಡುವ ಕುರಿತು. |
| ನಿರ್ಣಯ | | **ಯುವ ಬೋಧಕ ಸಿಬ್ಬಂದಿಗಳಿಗೆ ಪಿಎಚ್.ಡಿ. ಮಾರ್ಗದರ್ಶನ ಮಾಡಲು ಅವಕಾಶ ನೀಡುವ ವಿಷಯವನ್ನು ಚರ್ಚಿಸಿ ಸ್ನಾತಕೋತ್ತರ ವಿಭಾಗಗಳಲ್ಲಿ 05 ವರ್ಷ ಸೇವೆ ಸಲ್ಲಿಸಿದ ಸಹಾಯಕ ಪ್ರಾಧ್ಯಾಪಕರುಗಳಿಗೆ ಅವರ ಎರಡು ಸಂಶೋಧನಾ ಪತ್ರಿಕೆಗಳನ್ನು ಪ್ರಕಟಿಸಿದ್ದರೆ (ಪಿಎಚ್.ಡಿ.ಗೆ ಸಂಬಂಧಿಸಿದ ಪತ್ರಿಕೆಗಳನ್ನು ಹೊರತು ಪಡಿಸಿ) ಅಂತಹ ಸಹಾಯಕ ಪ್ರಾಧ್ಯಾಪಕರುಳಿಗೆ ಪಿಎಚ್.ಡಿ. ಮಾರ್ಗದರ್ಶಕರಾಗಿ ಮಾನ್ಯತೆ ನೀಡಲು ನಿರ್ಣಯಿಸಲಾಯಿತು. ಈ ವಿಷಯವನ್ನು ಪಿಎಚ್.ಡಿ. ನಿಯಮಾವಳಿಯಲ್ಲಿ ಸೇರಿಸಲು ನಿರ್ಣಯಿಸಲಾಯಿತು.** |
| 12) | ವಿಷಯ-: | ಕಿತ್ತೂರ ಚೆನ್ನಮ್ಮ ಪ್ರತಿಷ್ಠಾನದ ಮನವಿಯನ್ನು ಪರಿಗಣಿಸುವ ಕುರಿತು. |
| ನಿರ್ಣಯ | | **ಕಿತ್ತೂರ ಚೆನ್ನಮ್ಮ ಪ್ರತಿಷ್ಠಾನದ ಮನವಿ ಪರಿಗಣಿಸಿ ಸದರಿಯವರ ವಿನಂತಿಯನ್ನು ಸರ್ಕಾರಕ್ಕೆ ಕಳುಹಿಸಿ ಸರ್ಕಾರದಿಂದ ಅನುಮತಿ/ ಮಾರ್ಗದರ್ಶನ ಪಡೆದು ಮುಂದಿನ ಕ್ರಮವಹಿಸಲು ನಿರ್ಣಯಿಸಲಾಯಿತು.** |

ಕುಲಸಚಿವರು



ಕುಲಪತಿಗಳು